ಕರ್ನಾಟಕ ಸರ್ಕಾರ

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ(ಇತರೆ ಪರೀಕ್ಷೆಗಳು), ಮಲ್ಲೇಶ್ವರಂ, ಬೆಂಗಳೂರು-3.**

ಸಂಖ್ಯೆ:ಎಸ್1/ವಾ.ಪ/ಏಪ್ರಿಲ್-2021/38/2020-21 ದಿನಾಂಕ: 22.02.2021

**-: ಅಧಿಸೂಚನೆ :-**

**ವಿಷಯ:** ಏಪ್ರಿಲ್-2021ರ ಮಾಹೆಯಲ್ಲಿ ನಡೆಯಲಿರುವ ವಾಣಿಜ್ಯ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

**ಉಲ್ಲೇಖ:** 1) ಆಯುಕ್ತರು, ಸಾ.ಶಿ.ಇಲಾಖೆ ಮತ್ತು ಅಧ್ಯಕ್ಷರು, ಕ.ಪ್ರೌ.ಶಿ.ಪ.ಮಂಡಳಿ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 02.01.2019ರಂದು ನಡೆದ ಸಭಾ ನಡಾವಳಿ.

***

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಇತರೆ ಪರೀಕ್ಷೆಗಳ ವಿಭಾಗದಿಂದ ಏಪ್ರಿಲ್-2021 ಮಾಹೆಯಲ್ಲಿ ನಡೆಯುವ ವಾಣಿಜ್ಯ ಪರೀಕ್ಷೆಗೆ ರಾಜ್ಯದ ಮಾನ್ಯತೆ ಪಡೆದ ವಾಣಿಜ್ಯ ಸಂಸ್ಥೆಗಳಲ್ಲಿ ಅಭ್ಯಾಸ ಮಾಡುತ್ತಿರುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಪರೀಕ್ಷೆಗೆ ಹಾಜರಾಗಲು ಅರ್ಜಿಗಳನ್ನು ಸಂಬಂಧಿಸಿದ ವಾಣಿಜ್ಯ ಸಂಸ್ಥೆಗಳ ಮುಖಾಂತರ ಸಲ್ಲಿಸಬಹುದಾಗಿದೆ. ವಾಣಿಜ್ಯ ಸಂಸ್ಥೆಗಳ ಮುಖ್ಯಸ್ಥರು ತಮ್ಮ ಸಂಸ್ಥೆಯಿಂದ ಪರೀಕ್ಷೆಗೆ ಹಾಜರಾಗುವ ಅರ್ಹ ಅಭ್ಯರ್ಥಿಗಳ ವಿವರಗಳನ್ನು ಮಂಡಳಿಯ ಜಾಲತಾಣ https://sslc.karnataka.gov.in ಇಲ್ಲಿ login/Other exams/commerce examination ನಲ್ಲಿ Institute login ಮೂಲಕ Upload ಮಾಡಲು ಸೂಚಿಸಿದೆ.

**ವಾಣಿಜ್ಯ ಪರೀಕ್ಷೆ ತೆಗೆದುಕೊಳ್ಳಲು ಅಭ್ಯರ್ಥಿಗಳಿಗಿರಬೇಕಾದ ಅಗತ್ಯವಿರುವ ಅರ್ಹತೆಗಳು:-**

- ಸರ್ಕಾರಿ ಆದೇಶ ಸಂಖ್ಯೆ: ಇಡಿ4 ಎಲ್‌ಸಿಇ 2002, ಬೆಂಗಳೂರು ದಿನಾಂಕ: 28.01.2003ರಂತೆ ಎಸ್.ಎಸ್.ಎಲ್.ಸಿ./ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣ/ಅನುತ್ತೀರ್ಣರಾದ ವಿದ್ಯಾರ್ಥಿಗಳು ಆಂಗ್ಲ ಅಥವಾ ಕನ್ನಡ ಬೆರಳಚ್ಚು ಪ್ರಥಮ ದರ್ಜೆ ಪರೀಕ್ಷೆಗೆ ಹಾಜರಾಗಲು ಅರ್ಹತೆ ಪಡೆದಿರುತ್ತಾರೆ.
- ಕನ್ನಡ ಹಾಗೂ ಆಂಗ್ಲ ಬೆರಳಚ್ಚು ಪ್ರೌಢದರ್ಜೆ ಪರೀಕ್ಷೆ ತೆಗೆದುಕೊಳ್ಳಲು ಎಸ್.ಎಸ್.ಎಲ್.ಸಿ/ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಹಾಗೂ ಕನ್ನಡ ಮತ್ತು ಆಂಗ್ಲ ಬೆರಳಚ್ಚು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ 10 ತಿಂಗಳು ಪೂರ್ಣಗೊಳಿಸಿರಬೇಕು.
- ಆಂಗ್ಲ ಮತ್ತು ಕನ್ನಡ ಶೀಘ್ರಲಿಪಿ ಪ್ರಥಮದರ್ಜೆ ಪರೀಕ್ಷೆ ತೆಗೆದುಕೊಳ್ಳಲು ಎಸ್.ಎಸ್.ಎಲ್.ಸಿ/ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
- ಆಂಗ್ಲ ಶೀಘ್ರಲಿಪಿ ಮಧ್ಯಮ ದರ್ಜೆ ಪರೀಕ್ಷೆ ತೆಗೆದುಕೊಳ್ಳಲು ಎಸ್.ಎಸ್.ಎಲ್.ಸಿ/ತತ್ಸಮಾನ ಮತ್ತು ಆಂಗ್ಲ ಶೀಘ್ರಲಿಪಿ ಪ್ರಥಮ ದರ್ಜೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
- ಪ್ರೌಢದರ್ಜೆ ಶೀಘ್ರಲಿಪಿ ಪರೀಕ್ಷೆಗಳನ್ನು ಕಟ್ಟಲು ಪ್ರಥಮ ದರ್ಜೆ ಶೀಘ್ರಲಿಪಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ 10 ತಿಂಗಳು ಪೂರ್ಣಗೊಳಿಸಿರಬೇಕು.
- ಆಂಗ್ಲ/ಕನ್ನಡ ಶೀಘ್ರಲಿಪಿ ಪ್ರವೀಣ ದರ್ಜೆ ಪರೀಕ್ಷೆ ತೆಗೆದುಕೊಳ್ಳಲು ಎಸ್.ಎಸ್.ಎಲ್.ಸಿ/ತತ್ಸಮಾನ ಪರೀಕ್ಷೆ ಮತ್ತು ಆಂಗ್ಲ/ ಕನ್ನಡ ಶೀಘ್ರಲಿಪಿ ಪ್ರೌಢದರ್ಜೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
- ಮುದ್ರಣ ಪರೀಕ್ಷೆ ತೆಗೆದುಕೊಳ್ಳಲು 7ನೇ ತರಗತಿ/ಎಸ್.ಎಸ್.ಎಲ್.ಸಿ/ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಹಾಗೂ ಸರ್ಕಾರಿ ಮುದ್ರಣಾಲಯದ ಖಾಯಂ ನೌಕರರಾಗಿಬೇಕು.
- ಆಂಗ್ಲ ಮತ್ತು ಕನ್ನಡ ಬೆರಳಚ್ಚು ಪರೀಕ್ಷೆಗಳಿಗೆ ತಂಡಗಳನ್ನು(ಬ್ಯಾಚ್) ಸರಿಯಾಗಿ ನಮೂದಿಸಬೇಕು. ಪ್ರಥಮ ದರ್ಜೆಗೆ ಎ,ಬಿ,ಸಿ,ಡಿ,ಇ ತಂಡಗಳೆಂದೂ, ಪ್ರೌಢದರ್ಜೆಗೆ ಎ,ಬಿ,ಸಿ,ಡಿ ತಂಡಗಳೆಂದು ವಿಂಗಡಿಸಿ ಆನ್‌ಲೈನ್‌ನಲ್ಲಿ ಅರ್ಜಿಸಲ್ಲಿಸುವಾಗ ನಮೂದಿಸಬೇಕು. **ಯಾವುದೇ ಕಾರಣಕ್ಕೂ ತಂಡ ಬದಲಾವಣೆಗೆ ಅವಕಾಶವಿರುವುದಿಲ್ಲ.**
- ಆಂಗ್ಲ ಬೆರಳಚ್ಚು ಪ್ರವೀಣ ದರ್ಜೆ(01 XYZ), ಕನ್ನಡ ಬೆರಳಚ್ಚು ಪ್ರವೀಣ ದರ್ಜೆ (ವಿಷಯ ಸಂಕೇತ 06 XYZ) ಆಂಗ್ಲ ಶೀಘ್ರಲಿಪಿ ಪ್ರವೀಣ ದರ್ಜೆ(ವಿಷಯ ಸಂಕೇತ 11 XYZ) ಮತ್ತು ಕನ್ನಡ ಶೀಘ್ರಲಿಪಿ ಪ್ರವೀಣ ದರ್ಜೆ (ವಿಷಯ

- ಸಂಕೇತ(16 XYZ) ಪರೀಕ್ಷೆಗಳು, ವಾಣಿಜ್ಯ ಪರೀಕ್ಷಾ ಕೇಂದ್ರ 009-AN ಡಯಟ್ ಬೆಂಗಳೂರು ಗ್ರಾಮಾಂತರ ಜಿಲ್ಲೆ, ರಾಜಾಜಿನಗರ, ಬೆಂಗಳೂರು ಇಲ್ಲಿ ಮಾತ್ರ ನಡೆಸಲಾಗುತ್ತದೆ.
- ಮುದ್ರಣ ಪರೀಕ್ಷೆಗಳು 03-AS ಸರ್ಕಾರಿ ಮುದ್ರಣಾಲಯ, ಮೈಸೂರು ರಸ್ತೆ, ಆರ್.ವಿ.ಕಾಲೇಜು ಅಂಚೆ, ಬೆಂಗಳೂರು ಇಲ್ಲಿ ಮಾತ್ರ ನಡೆಸಲಾಗುತ್ತದೆ.
- ಫಲಿತಾಂಶ ಉತ್ತಮ ಪಡಿಸಿಕೊಳ್ಳ ಬಯಸುವ ಅಭ್ಯರ್ಥಿಗಳು ಮಂಡಳಿಯಿಂದ ಅನುಮತಿ ಪಡೆದು ಈ ಹಿಂದೆ ವ್ಯಾಸಂಗ ಮಾಡಿದ್ದ ಸಂಸ್ಥೆಯಿಂದಲೇ ಅರ್ಜಿ ಸಲ್ಲಿಸಬೇಕು. ಸಂಸ್ಥೆಯ ಪ್ರಾಚಾರ್ಯರ ಹಂತದಲ್ಲಿ ಕೇಂದ್ರಗಳ ಬದಲಾವಣೆಗೆ ಅವಕಾಶವಿರುವುದಿಲ್ಲ.
- ಅಭ್ಯರ್ಥಿಗಳು ಜೂನಿಯರ್ ಪರೀಕ್ಷೆ ಉತ್ತೀರ್ಣರಾಗದೇ ನೇರವಾಗಿ ಪ್ರೌಢದರ್ಜೆ ಪರೀಕ್ಷೆ ತೆಗೆದುಕೊಳ್ಳುವಂತಿಲ್ಲ ಹಾಗೂ ಎರಡೂ ಪರೀಕ್ಷೆಗಳನ್ನು ಒಂದೇ ಬಾರಿ ತೆಗೆದುಕೊಳ್ಳಲು ಅವಕಾಶವಿಲ್ಲ.
- ವಾಣಿಜ್ಯ ಸಂಸ್ಥೆಯವರು ವಾರ್ಷಿಕ ನವೀಕರಣ ಶುಲ್ಕ ರೂ.205-00ನ್ನು ಆನ್‌ಲೈನ್ ಹಾಗೂ ಚಲನ್ ಮೂಲಕ ಪಾವತಿಸಲು ಸಂಸ್ಥೆಯ ಲಾಗಿನ್‌ನಲ್ಲಿ ಅವಕಾಶ ಕಲ್ಪಿಸಿದೆ.
- ಯಾವುದೇ ವಾಣಿಜ್ಯ ಸಂಸ್ಥೆಯವರು ಅನುಮತಿ ಪಡೆದಿರುವ ವಿಷಯಗಳನ್ನಲ್ಲದೇ ಬೇರೆ ವಿಷಯಗಳಲ್ಲಿ ಅಭ್ಯರ್ಥಿಗಳನ್ನು ಪರೀಕ್ಷೆಗೆ ಹಾಜರು ಪಡಿಸಿದ್ದು ಕಂಡುಬಂದಲ್ಲಿ ಮಂಡಳಿಯ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

**ಪರೀಕ್ಷಾ ವಿಷಯಗಳು:**

| ಪರೀಕ್ಷಾ ವಿಷಯಗಳು | ಏಪ್ರಿಲ್-2021ರ ಅವಧಿಯಲ್ಲಿ ನಡೆಸಲಾಗುವ ವಾಣಿಜ್ಯ ಪರೀಕ್ಷೆಯ ವಿಷಯ ಸಂಕೇತ ಮತ್ತು ದರ್ಜೆಗಳು | |
|---|---|---|
| | ವಿಷಯ ಸಂಕೇತದ ಸಂಖ್ಯೆ | ದರ್ಜೆ |
| ಆಂಗ್ಲ ಮತ್ತು ಕನ್ನಡ ಬೆರಳಚ್ಚು | 01 XYZ, 06 XYZ | ಪ್ರವೀಣ ದರ್ಜೆ |
| | 03 XY, 08 XY | ಪ್ರೌಢ ದರ್ಜೆ |
| | 05 XY, 10 XY | ಪ್ರಥಮ ದರ್ಜೆ |
| ಆಂಗ್ಲ ಶೀಘ್ರಲಿಪಿ | 11 XYZ | ಪ್ರವೀಣ ದರ್ಜೆ |
| | 13 XYZ | ಪ್ರೌಢ ದರ್ಜೆ |
| | 14 XY | ಮಧ್ಯಮ ದರ್ಜೆ |
| | 15 XY | ಪ್ರಥಮ ದರ್ಜೆ |
| ಕನ್ನಡ ಶೀಘ್ರಲಿಪಿ | 16 XYZ | ಪ್ರವೀಣ ದರ್ಜೆ |
| | 18 XYZ | ಪ್ರೌಢದರ್ಜೆ |
| | 20 XY | ಪ್ರಥಮ ದರ್ಜೆ |
| ಬರವಣಿಗೆ ಪರೀಕ್ಷೆಗಳು | 25 X, 21XY, 39X | ಪ್ರೌಢದರ್ಜೆ |
| | 26X, 22XY, 40X | ಪ್ರಥಮ ದರ್ಜೆ |
| ಮುದ್ರಣ ಪರೀಕ್ಷೆಗಳು | 31 X, 33XY, 35XY, 37XY | ಪ್ರೌಢದರ್ಜೆ |
| | 32X, 34XY, 36XY, 38XY | ಪ್ರಥಮ ದರ್ಜೆ |

**ವಿಷಯವಾರು ಪರೀಕ್ಷಾ ಶುಲ್ಕದ ವಿವರಗಳು**

| ಕ್ರ.ಸಂ | ವಿಷಯಗಳು | ಪ್ರಥಮದರ್ಜೆ | ಮಧ್ಯಮ ದರ್ಜೆ | ಪ್ರೌಢ ದರ್ಜೆ | ಪ್ರವೀಣ ದರ್ಜೆ |
|---|---|---|---|---|---|
| 1. | ಆಂಗ್ಲ ಮತ್ತು ಕನ್ನಡ ಬೆರಳಚ್ಚು | 390–00 | – | 430–00 | 624–00 |
| 2. | ಆಂಗ್ಲ ಶೀಘ್ರಲಿಪಿ | 430–00 | 456–00 | 468–00 | 624–00 |
| 3. | ಕನ್ನಡ ಶೀಘ್ರಲಿಪಿ | 430–00 | – | 468–00 | 624–00 |
| 4 | ಬರವಣಿಗೆ ಪರೀಕ್ಷೆಗಳು | 468–00 | – | 499–00 | – |
| 5 | ಮುದ್ರಣ ಪರೀಕ್ಷೆಗಳು | 468–00 | – | 499–00 | – |

ಮೇಲಿನ ಶುಲ್ಕಗಳ ಜೊತೆಗೆ ಲ್ಯಾಮಿನೇಶನ್ ಶುಲ್ಕ ರೂ.20/–ಗಳನ್ನು ಸೇರಿಸಿ ಪಾವತಿಸಬೇಕಾಗಿರುತ್ತದೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ಇದ್ದು, ಅರ್ಜಿ ಶುಲ್ಕ, ಅಂಕಪಟ್ಟಿ ಶುಲ್ಕ, ಹಾಗೂ ಲ್ಯಾಮಿನೇಶನ್ ಶುಲ್ಕ ಒಟ್ಟು ರೂ.30/–ಗಳನ್ನು ಪಾವತಿಸಬೇಕಾಗುತ್ತದೆ.

**ನೆಫ್ಟ್ ಚಲನ್ ಹಾಗೂ ಅರ್ಜಿಗಳನ್ನು ಸಲ್ಲಿಸಲು ನಿಗಧಿಗೊಳಿಸಿರುವ ದಿನಾಂಕಗಳ ವಿವರ**

| ಕ್ರ ಸಂ | ವಿವರ | ನಿಗಧಿಪಡಿಸಿರುವ ದಿನಾಂಕ |
|---|---|---|
| 01 | ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರು ಪ್ರಥಮ ಮಾನ್ಯತೆ/ಮಾನ್ಯತೆ ನವೀಕರಣ ಪ್ರತಿಯನ್ನು ತಮ್ಮ ಲಾಗಿನ್‌ನಲ್ಲಿ ಆನ್‌ಲೈನ್ ಮೂಲಕ ಅನುಮೋದಿಸುವುದು. | 01.03.2021 ರಿಂದ 16.03.2021 |
| 02 | ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ಪ್ರತಿಯನ್ನು ಅಪ್‌ಲೋಡ್ ಮಾಡುವುದು ಹಾಗೂ ಶಾಲಾ ಸಂಕೇತ ನವೀಕರಣ ಶುಲ್ಕ ರೂ.205–00ಗಳನ್ನು ಪಾವತಿಸುವುದು. | 01.03.2021 ರಿಂದ 16.03.2021 |
| 03 | ಮಂಡಳಿ ಜಾಲತಾಣದಲ್ಲಿ ಸಂಸ್ಥೆಯ ಲಾಗಿನ್ ಮೂಲಕ ಅಭ್ಯರ್ಥಿಗಳ ಮಾಹಿತಿಯನ್ನು ಅಪ್‌ಲೋಡ್ ಮಾಡುವುದು(ದಂಡರಹಿತವಾಗಿ) | 01.03.2021 ರಿಂದ 12.03.2021 |
| 04 | ಮಂಡಳಿ ಜಾಲತಾಣದಲ್ಲಿ ಸಂಸ್ಥೆಯ ಲಾಗಿನ್ ಮೂಲಕ ಅಭ್ಯರ್ಥಿಗಳ ಮಾಹಿತಿಯನ್ನು ದಂಡ ಸಹಿತವಾಗಿ(ದಿನವೊಂದಕ್ಕೆ ರೂ.150–00ರಂತೆ) ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ | 16.03.2021 |
| 05 | ನಾಮಿನಲ್ ರೋಲ್, ಶುಲ್ಕ ಪಾವತಿಸಿದ ಚಲನ್ ಮೂಲ ಪ್ರತಿ ಹಾಗೂ ಸಂಬಂಧಿಸಿದ ಇತರೆ ದಾಖಲೆಗಳನ್ನು ಡಯಟ್‌ಗಳಿಗೆ ಸಲ್ಲಿಸಿ ಡಯಟ್ ಲಾಗಿನ್‌ನಲ್ಲಿ ಉಪನಿರ್ದೇಶಕರು(ಅಭಿವೃದ್ಧಿ)ರವರು ಅನುಮೋದಿಸುವುದು. | 19.03.2021 ರಿಂದ 22.03.2021 |
| 06 | ಮಂಡಳಿ ಜಾಲತಾಣದಲ್ಲಿ ಸಂಬಂಧಿಸಿದ ವಾಣಿಜ್ಯ ಸಂಸ್ಥೆಯ ಲಾಗಿನ್ ಮೂಲಕ ಅಭ್ಯರ್ಥಿಗಳ ಪರೀಕ್ಷಾ ಶುಲ್ಕವನ್ನು ಈ ಮೂಲಕ ಜಮೆ ಮಾಡುವುದು<br>1. ಚಲನ್ ಮುದ್ರಿಸಿಕೊಂಡು(NEFT/RTGS)ಮೂಲಕ<br>2. ಆನ್‌ಲೈನ್(Debit card/Credit card/Net Banking) | 17.03.2021 ರಿಂದ 19.03.2021 |
| 07 | ನಾಮಿನಲ್ ರೋಲ್, ಶುಲ್ಕ ಪಾವತಿಸಿದ ಚಲನ್‌ನ ಮೂಲ ಪ್ರತಿ ಹಾಗೂ ಸಂಬಂಧಿಸಿದ ಇತರೆ ದಾಖಲೆಗಳನ್ನು ಮಂಡಳಿಗೆ ಕಳುಹಿಸುವುದು. | 22.03.2021 ರಿಂದ 26.03.2021 |

**ಆನ್‌ಲೈನ್ ಮೂಲಕ ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ಪ್ರತಿ ಅಪ್‌ಲೋಡ್, ಶಾಲಾ ಸಂಕೇತ ನವೀಕರಣ ಶುಲ್ಕ ಹಾಗೂ ಪರೀಕ್ಷಾ ಶುಲ್ಕ ಪಾವತಿಸಲು ವಾಣಿಜ್ಯ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಿಗೆ ಸೂಚನೆಗಳು:-**

1. ಏಪ್ರಿಲ್-2021ರ ಮಾಹೆಯಲ್ಲಿ ನಡೆಯುವ ವಾಣಿಜ್ಯ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಂಸ್ಥೆಗಳ ಮುಖ್ಯಸ್ಥರು ತಮ್ಮ Institute login ನಲ್ಲಿ ಸಂಸ್ಥೆಯ ಮಾನ್ಯತೆ/ಮಾನ್ಯತೆ ನವೀಕರಣ ಪ್ರತಿಯನ್ನು pdf ನಮೂನೆ(upto 1mb size) ಯಲ್ಲಿ ಸ್ಕ್ಯಾನ್ ಮಾಡಿ Upload ಮಾಡುವುದು.
2. ಶಾಲಾ ಸಂಕೇತ ನವೀಕರಣ ಶುಲ್ಕ ಹಾಗೂ ಪರೀಕ್ಷಾ ಶುಲ್ಕವನ್ನು Institute login ನಲ್ಲಿ ಆನ್‌ಲೈನ್ ಮೂಲಕ ಪಾವತಿಸಲು ಅವಕಾಶ ಕಲ್ಪಿಸಿದ್ದು, Debit card/Credit card/Net Banking ಮೂಲಕ ಶುಲ್ಕ ಪಾವತಿಸಬೇಕಾಗಿರುತ್ತದೆ.
3. ಶಾಲಾ ಸಂಕೇತ ನವೀಕರಣ ಶುಲ್ಕ ಹಾಗೂ ಪರೀಕ್ಷಾ ಶುಲ್ಕವನ್ನು ಚಲನ್ ಮೂಲಕ ಸಹ ಪಾವತಿಸಲು Institute login ನಲ್ಲಿ ಅವಕಾಶ ಕಲ್ಪಿಸಿದ್ದು, ಈ ಸೇವೆಯ ಮೂಲಕ ಶುಲ್ಕ ಪಾವತಿಸಲು ಕಡ್ಡಾಯವಾಗಿ Institute login ನಲ್ಲಿ ಜನರೇಟ್ ಆದ ಚಲನ್ ಪ್ರತಿಯನ್ನು ಬಳಸಿ ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ NEFT/RTGS ಮುಖಾಂತರ ಪಾವತಿಸಬಹುದಾಗಿರುತ್ತದೆ.
4. ಪರೀಕ್ಷಾ ಶುಲ್ಕ/ಶಾಲಾ ಸಂಕೇತ ನವೀಕರಣ ಶುಲ್ಕವನ್ನು ಚಲನ್ ಮೂಲಕ ಪಾವತಿಸಲು ಬಯಸುವ ಸಂಸ್ಥೆಯ ಮುಖ್ಯಸ್ಥರು ಕಡ್ಡಾಯವಾಗಿ ಲಾಗಿನ್‌ನಲ್ಲಿ ಲಭ್ಯ ಮಾಡಲಾಗುವ ಚಲನ್ ಹೊರತುಪಡಿಸಿ ಮತ್ಯಾವುದೇ ಚಲನ್/ಡಿ.ಡಿ/ಚೆಕ್ ಮೂಲಕ ಶುಲ್ಕ ಪಾವತಿಸಿದಲ್ಲಿ ಅಂತಹ ಶುಲ್ಕಪಾವತಿಗಳನ್ನು ಮಾನ್ಯ ಮಾಡಲಾಗುವುದಿಲ್ಲ. ಒಂದು ವೇಳೆ ಈ ರೀತಿ ಶುಲ್ಕ ಪಾವತಿಸಿದಲ್ಲಿ ಶುಲ್ಕವನ್ನು ಮಂಡಳಿಯಿಂದ ಹಿಂದಿರುಗಿಸಲಾಗುವುದಿಲ್ಲ.
5. ಪ್ರಥಮ ಮಾನ್ಯತೆ/ಮಾನ್ಯತೆ ನವೀಕರಣ ಪ್ರತಿಯನ್ನು Institute login ನಲ್ಲಿ Upload ಮಾಡಿ ಸಂಬಂಧಪಟ್ಟ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರು ಅನುಮೋದಿಸಿದ ನಂತರವಷ್ಟೇ ಆನ್‌ಲೈನ್ ನಲ್ಲಿ ಪರೀಕ್ಷಾ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ.

**ಏಪ್ರಿಲ್-2021ರ ಮಾಹೆಯಲ್ಲಿ ನಡೆಯುವ ವಾಣಿಜ್ಯ ಪರೀಕ್ಷೆಗೆ ಸಂಬಂಧಿಸಿದಂತೆ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರುಗಳ ಪಾತ್ರ**

1. ವಾಣಿಜ್ಯ ಸಂಸ್ಥೆಗಳಿಗೆ ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣದ ಸಕ್ಷಮ ಪ್ರಾಧಿಕಾರ ಸಂಬಂಧಪಟ್ಟ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರವರಾಗಿರುತ್ತಾರೆ.
2. ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ಪ್ರತಿಯನ್ನು ಅನುಮೋದಿಸಲು ಸಂಬಂಧಪಟ್ಟ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರಿಗೆ Login ವ್ಯವಸ್ಥೆ ಕಲ್ಪಿಸಲಾಗಿದೆ.
3. ಏಪ್ರಿಲ್-2021ರ ಮಾಹೆಯಲ್ಲಿ ವಾಣಿಜ್ಯ ಪರೀಕ್ಷೆಯ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸ್ವೀಕರಿಸುವ ಸಂದರ್ಭದಲ್ಲಿ ವಾಣಿಜ್ಯ ಸಂಸ್ಥೆಗಳ ಮುಖ್ಯಸ್ಥರು ತಮ್ಮ ಸಂಸ್ಥೆಯ ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ಪ್ರತಿಯನ್ನು pdf ನಮೂನೆಯಲ್ಲಿ 1 mb ಗಾತ್ರದೊಳಗೆ Upload ಮಾಡಲು ತಿಳಿಸಿದೆ. ಸದರಿ ಮಾಹಿತಿಯನ್ನು ಪರಿಶೀಲಿಸಿ, ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ಪ್ರತಿಯನ್ನು ಆನ್‌ಲೈನ್ ಮೂಲಕ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರ ಲಾಗಿನ್‌ನಲ್ಲಿ ಅನುಮೋದಿಸಲು/ತಿರಸ್ಕರಿಸಲು ಅಕಾಶ ಕಲ್ಪಿಸಿದೆ.
4. ಒಂದುವೇಳೆ ಸಂಸ್ಥೆಗಳ ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ಪ್ರತಿಯನ್ನು ಒದಗಿಸಲಾದ ಲಾಗಿನ್‌ನಲ್ಲಿ ತಿರಸ್ಕರಿಸಿದಲ್ಲಿ, ತಿರಸ್ಕೃತಗೊಂಡ ವಾಣಿಜ್ಯ ಸಂಸ್ಥೆಯವರು ಸರಿಯಾದ ಮಾಹಿತಿಯನ್ನು ತಮ್ಮ ಲಾಗಿನ್‌ನಲ್ಲಿ ಮತ್ತೊಮ್ಮೆ ಅಪ್‌ಲೋಡ್ ಮಾಡಲು ಅವಕಾಶ ಕಲ್ಪಿಸಿದೆ. ಇದನ್ನು ಪರಿಶೀಲಿಸಿ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರು ತಮ್ಮ Loginನಲ್ಲಿ ಮತ್ತೊಮ್ಮೆ ಅನುಮೋದಿಸಲು ಕ್ರಮವಹಿಸಬಹುದಾಗಿದೆ.
5. ಪ್ರಥಮ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ಪ್ರತಿಯನ್ನು ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರು ಅನುಮೋದಿಸಿದ ನಂತರವಷ್ಟೆ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ.

**ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವಾಗ ಸಂಸ್ಥೆಯ ಮುಖ್ಯಸ್ಥರು ಪಾಲಿಸಬೇಕಾದ ಸೂಚನೆಗಳು:-**

1. ಏಪ್ರಿಲ್-2021ರ ವಾಣಿಜ್ಯ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ನೋಂದಣಿ ಮಾಹಿತಿಯನ್ನು ಮಂಡಳಿ ಜಾಲತಾಣದಲ್ಲಿ login/Other exams/commerce examination ನಲ್ಲಿ ಸಂಸ್ಥೆಯ ಲಾಗಿನ್ ಮುಖಾಂತರ ಅಪ್‌ಲೋಡ್ ಮಾಡುವುದು.

2. ಪರೀಕ್ಷಾ ಶುಲ್ಕದಿಂದ ವಿನಾಯಿತಿ ಪಡೆಯಲು ಬಯಸುವ ಅಭ್ಯರ್ಥಿಗಳಿಂದ ಕಡ್ಡಾಯವಾಗಿ ನಿಗಧಿತ ನಮೂನೆಯಲ್ಲಿ ಜಾತಿ ಪ್ರಮಾಣ ಪತ್ರವನ್ನು ಪಡೆದು, ಅದರ ನಿಗಧಿತ ಕಾಲಂನಲ್ಲಿ ಪ್ರಮಾಣ ಪತ್ರದ ಸಂಖ್ಯೆ (RD)ಯನ್ನು ನಮೂದಿಸಬೇಕು.

3. 2003 ಹಾಗೂ ಇದಕ್ಕಿಂತ ಹಿಂದಿನ ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳ ಹಾಗೂ ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ ಅಂಕಪಟ್ಟಿಗಳನ್ನು ಪರಿಶೀಲಿಸಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಎಲ್ಲಾ ಮಾಹಿತಿಗಳನ್ನು ಸರಿಯಾಗಿ ತುಂಬಬೇಕು.

4. 2003ರ ಹಾಗೂ 2003ರ ನಂತರದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ ಮಾಹಿತಿಯನ್ನು ಅಪ್‌ಲೋಡ್ ಮಾಡುವಾಗ ಎಸ್.ಎಸ್.ಎಲ್.ಸಿ ನೊಂದಣಿ ಸಂಖ್ಯೆಯನ್ನು ನಮೂದಿಸಿದಾಗ ಮಾಹಿತಿಗಳು AUTO FETCH ಆಗುತ್ತವೆ. ಉಳಿದ ಮಾಹಿತಿಗಳನ್ನು ಸಂಸ್ಥೆಯ ಮುಖ್ಯಸ್ಥರು ಭರ್ತಿ ಮಾಡುವುದು.

5. ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಬಯಸುವ ಅಭ್ಯರ್ಥಿಗಳು ಮಂಡಳಿಯಿಂದ ಅನುಮತಿ ಪಡೆದು ಈ ಹಿಂದೆ ವ್ಯಾಸಂಗ ಮಾಡಿದ್ದ ಸಂಸ್ಥೆಯಿಂದಲೇ ಅರ್ಜಿ ಸಲ್ಲಿಸಬೇಕು. ಖಾಸಗಿ ಅಭ್ಯರ್ಥಿಗಳು ಮಂಡಳಿಯ ಅನುಮತಿ ಪತ್ರದ ಸಂಖ್ಯೆಯನ್ನು ನಿಗಧಿತ ಕಾಲಂ ನಲ್ಲಿ ನಮೂದಿಸಬೇಕು.

6. ಉಪನಿರ್ದೇಶಕರು (ಅಭಿವೃದ್ಧಿ)ರವರು (ಡಯಟ್) ಗೊತ್ತುಪಡಿಸಿದ ಪರೀಕ್ಷಾ ಕೇಂದ್ರದಲ್ಲಿಯೇ ಪರೀಕ್ಷೆಯನ್ನು ತೆಗೆದುಕೊಳ್ಳುವುದು.

7. ಏಪ್ರಿಲ್–2021ರ ವಾಣಿಜ್ಯ ಪರೀಕ್ಷೆಗೆ ಅರ್ಜಿಸಲ್ಲಿಸುತ್ತಿರುವ ಎಲ್ಲಾ ಅಭ್ಯರ್ಥಿಗಳು ಮಂಡಳಿಯ ನಿಯಮಾನುಸಾರ ಕನಿಷ್ಠ ಹಾಜರಾತಿ ಹೊಂದಿರುವ ಬಗ್ಗೆ ದೃಢೀಕರಿಸಿಕೊಳ್ಳುವುದು. ಒಂದುವೇಳೆ ಕನಿಷ್ಠ ಹಾಜರಾತಿಗಿಂತ ಕಡಿಮೆ ಹಾಜರಾತಿ ಹೊಂದಿರುವ ಅಭ್ಯರ್ಥಿಗಳಿಗೆ ಪರೀಕ್ಷೆಗೆ ಅರ್ಜಿ ಸಲ್ಲಿಸಿದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಸ್ಥೆಯ ಪ್ರಾಚಾರ್ಯರೇ ಹೊಣೆಗಾರರಾಗಿರುತ್ತೀರಿ.

8. ಅರ್ಜಿಗಳನ್ನು ಸ್ವೀಕರಿಸುವ ಅಂತಿಮ ದಿನಾಂಕದ ನಂತರ ಅರ್ಜಿಯಲ್ಲಿ ಅಭ್ಯರ್ಥಿಗಳ ಮಾಹಿತಿಯನ್ನು ತಿದ್ದುಪಡಿ ಮಾಡಬೇಕಾದಲ್ಲಿ ಮಂಡಳಿ ನಿಗಧಿಪಡಿಸಿದ ಅವಧಿಯಲ್ಲಿ ಮಾತ್ರ ತಿದ್ದುಪಡಿ ಮಾಡಿಕೊಳ್ಳತಕ್ಕದ್ದು.

**9.** ಎಸ್.ಎಸ್.ಎಲ್.ಸಿ. ನೊಂದಣಿ ಸಂಖ್ಯೆ ಮೂಲಕ **AUTOFETCH** ಆದ ಮಾಹಿತಿಗಳನ್ನು ತಿದ್ದುಪಡಿ ಮಾಡಿಕೊಳ್ಳಲು ಅವಕಾಶ ಇರುವುದಿಲ್ಲ.

**10.** ನಿಗಧಿಪಡಿಸಿದ ದಿನಾಂಕದ ನಂತರ ವಿಷಯ ಸಂಕೇತದ ಬದಲಾವಣೆಗೆ ಅರ್ಜಿ ಸಲ್ಲಿಸಿದಲ್ಲಿ ತಪ್ಪಿಗೆ ರೂ. 500–00ಗಳ ದಂಡ ವಿಧಿಸಲಾಗುವುದು. ಮಂಡಳಿಯ ಗಮನಕ್ಕೆ ತರದೇ ಪರೀಕ್ಷಾ ಕೇಂದ್ರದಲ್ಲಿ ಬದಲಾವಣೆಗೆ ಅವಕಾಶ ಇರುವುದಿಲ್ಲ.

**11. ಅರ್ಜಿ ಸಲ್ಲಿಸುವ ಪ್ರಕ್ರಿಯೆಯನ್ನು ಈಗಾಗಲೇ ಗಣಕೀಕರಣ ವ್ಯವಸ್ಥೆಗೆ ಒಳಪಡಿಸಿದ್ದು, ಭೌತಿಕವಾಗಿ ಯಾವುದೇ ರೀತಿಯ ತಿದ್ದುಪಡಿಗೆ ಅವಕಾಶವಿರುವುದಿಲ್ಲ.**

**12. ಮಂಡಳಿಯ ಗಮನಕ್ಕೆ ತರದೇ ಪರೀಕ್ಷಾ ಕೇಂದ್ರಗಳಲ್ಲಿ ಬದಲಾವಣೆ ಮಾಡಿಕೊಂಡು ಪರೀಕ್ಷೆಗೆ ಹಾಜರು ಪಡಿಸಿದಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದಿಲ್ಲ. ಹಾಗೂ ಮುಂದಿನ ಆಗುಹೋಗುಗಳಿಗೆ ಸಂಸ್ಥೆಯ ಪ್ರಾಚಾರ್ಯರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.**

**13.** ಅಭ್ಯರ್ಥಿಗಳು ಅರ್ಜಿಯನ್ನು ನೋಂದಾಯಿಸಿದ ವಾಣಿಜ್ಯ ಸಂಸ್ಥೆಯ ಲಾಗಿನ್‌ಗೆ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು ಅಪ್‌ಲೋಡ್ ಮಾಡಲಾಗುವುದು. ಪರೀಕ್ಷೆಗೆ ನೋಂದಾಯಿಸಿದ ಅಭ್ಯರ್ಥಿಗಳು ಸದರಿ ವಾಣಿಜ್ಯ ಸಂಸ್ಥೆಯಿಂದಲೇ ಪ್ರವೇಶ ಪತ್ರಗಳನ್ನು ಪಡೆಯುವುದು.

ಮೇಲಿನ ಎಲ್ಲಾ ಸೂಚನೆಗಳನ್ನು ಸಂಬಂಧಪಟ್ಟ ವಾಣಿಜ್ಯ ಸಂಸ್ಥೆಯ ಮುಖ್ಯಸ್ಥರು ತಪ್ಪದೇ ಪಾಲಿಸಲು ತಿಳಿಸಿದೆ. ನಿಯಮಗಳನ್ನು ಪಾಲಿಸದಿದ್ದಲ್ಲಿ ಹಾಗೂ ತಪ್ಪು ಮಾಹಿತಿ/ದಾಖಲೆಗಳನ್ನು ಅಪ್‌ಲೋಡ್ ಮಾಡಿದಲ್ಲಿ ಮುಂದಿನ ತೊಂದರೆಗಳಿಗೆ ಸಂಬಂಧಿಸಿದ ಸಂಸ್ಥೆಯ ಪ್ರಾಚಾರ್ಯರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

- **<u>ವಿಶೇಷ ಸೂಚನೆ:–</u> ಪರೀಕ್ಷಾ ಅರ್ಜಿಗಳನ್ನು ಮಂಡಳಿಯ ಜಾಲತಾಣದಲ್ಲಿ ಸಂಸ್ಥೆಯ ಲಾಗಿನ್ ಮೂಲಕ ಸಲ್ಲಿಸುವ ಸಮಯದಲ್ಲಿ ವಿದ್ಯಾರ್ಥಿಗಳ ಭಾವಚಿತ್ರ 60 ರಿಂದ 80 KB ಹಾಗೂ ಸಹಿಯನ್ನು 20 ರಿಂದ 50 KB JPEG ನಮೂನೆಯಲ್ಲಿ ಅಪ್‌ಲೋಡ್ ಮಾಡುವುದು.**
- **ಭಾವಚಿತ್ರ ನೇರ ಭಂಗಿಯಾಗಿರಬೇಕು ಹಾಗೂ ಭಾವಚಿತ್ರವನ್ನು ಮಾತ್ರವೇ ಸ್ಕ್ಯಾನ್ ಮಾಡಿಕೊಂಡು ಅಪ್‌ಲೋಡ್ ಮಾಡಬೇಕೆ ಹೊರತು ಇಡೀ ಪೇಪರ್ ಸ್ಕ್ಯಾನ್ ಮಾಡಿ ಅಪಲೋಡ್ ಮಾಡುವಂತಿಲ್ಲ.**

## ಏಪ್ರಿಲ್-2021ರ ಮಾಹೆಯ ವಾಣಿಜ್ಯ ಪರೀಕ್ಷೆಗೆ ಸಂಬಂಧಿಸಿದಂತೆ ಉಪನಿರ್ದೇಶಕರು(ಅಭಿವೃದ್ಧಿ)ರವರ ಪಾತ್ರ

1. ಏಪ್ರಿಲ್-2021ರ ಮಾಹೆಯ ವಾಣಿಜ್ಯ ಪರೀಕ್ಷೆಗೆ ಸಂಬಂಧಿಸಿದಂತೆ, ಪ್ರತಿ ಡಯಟ್‌ಗಳಿಗೂ ಲಾಗಿನ್‌ಗಳನ್ನು ನೀಡಲಾಗಿದೆ. ಸಂಬಂಧಪಟ್ಟ ಜಿಲ್ಲೆಯ ವಾಣಿಜ್ಯ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಏಪ್ರಿಲ್-2021ರ ಪರೀಕ್ಷೆಗೆ ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಗಳ ಮಾಹಿತಿಯನ್ನು ಮಂಡಳಿಯಿಂದ ಸಂಸ್ಥೆವಾರು ಸದರಿ ಲಾಗಿನ್‌ನಲ್ಲಿ ಲಭ್ಯಗೊಳಿಸಲಾಗುವುದು.
2. ವಾಣಿಜ್ಯ ಸಂಸ್ಥೆಯವರು ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸಿದ ಮಾಹಿತಿಗಳನ್ನು ಪರಿಶೀಲಿಸಿ ಡಯಟ್ ಲಾಗಿನ್‌ನಲ್ಲಿ ಅಭ್ಯರ್ಥಿಗಳ ಮಾಹಿತಿಯನ್ನು ಅನುಮೋದಿಸುವುದು ಅಥವಾ ತಿರಸ್ಕರಿಸುವುದು(Aprove/Reject)
3. ತಿರಸ್ಕೃತಗೊಂಡ ಅರ್ಜಿಗಳಿಗೆ Remarks ಕಾಲಂನಲ್ಲಿ ಸಕಾರಣವನ್ನು ನಮೂದಿಸುವುದು ಹಾಗೂ ಸರಿಯಾದ ಮಾಹಿತಿಯನ್ನು ಸಂಬಂಧಪಟ್ಟ ಸಂಸ್ಥೆಯವರು ನಿಗಧಿತ ಅವಧಿಯಲ್ಲಿ ಒದಗಿಸಿದಲ್ಲಿ ಮತ್ತೊಮ್ಮೆ ಅನುಮೋದಿಸಲು ಡಯಟ್ ಲಾಗಿನ್‌ನಲ್ಲಿ ಅವಕಾಶ ಕಲ್ಪಿಸಿದೆ.
4. ವಾಣಿಜ್ಯ ಶಿಕ್ಷಣ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ಪರೀಕ್ಷಾ ಕೇಂದ್ರಗಳನ್ನು ಗುರುತಿಸುವುದು, ಪರೀಕ್ಷಾ ಕೇಂದ್ರದ ಅಗತ್ಯ ಮಾನವ ಹಾಗೂ ಭೌತಿಕ ಸಂಪನ್ಮೂಲಗಳನ್ನು ಉಪನಿರ್ದೇಶಕರು(ಅಭಿವೃದ್ಧಿ) ಒದಗಿಸುವುದು.
5. ಉಪನಿರ್ದೇಶಕರು(ಅಭಿವೃದ್ಧಿ)ರವರಿಂದ ಅನುಮೋದನೆಗೊಂಡ ನಂತರವೇ ಅಭ್ಯರ್ಥಿಗಳಿಗೆ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಗುತ್ತದೆ.
6. ಏಪ್ರಿಲ್-2021ರ ವಾಣಿಜ್ಯ ಪರೀಕ್ಷೆಗೆ ಈ ಕೆಳಕಂಡ ದಾಖಲೆಗಳನ್ನು ಸಂಸ್ಥೆಯ ಪ್ರಾಚಾರ್ಯರು ,ಸಂಬಂಧಿಸಿದ ಉಪನಿರ್ದೇಶಕರು (ಅಭಿವೃದ್ಧಿ)(ಡಯಟ್)ರವರಿಗೆ ಅಗತ್ಯ ದಾಖಲೆಗಳನ್ನು ಖುದ್ದಾಗಿ ಅಥವಾ ರಿಜಿಸ್ಟರ್ಡ್ ಅಂಚೆಯ ಮೂಲಕ ಕೆಳಗೆ ತಿಳಿಸಿರುವ ವಿಳಾಸಕ್ಕೆ ದಿನಾಂಕ: 26.03.2021 ರೊಳಗೆ ಸಲ್ಲಿಸುವುದು ಕಡ್ಡಾಯ.
    1. ಮುಖಪುಟ (Covering letter).
    2. ಶುಲ್ಕ ಪಾವತಿಸಿದ ಮೂಲ ನೆಫ್ಟ್ ಚಲನ್(ಕಡ್ಡಾಯವಾಗಿ ಸಂಸ್ಥೆಯ ಲಾಗಿನ್‌ನಲ್ಲಿ ಜನರೇಟ್ ಆದ ಚಲನ್ ಬಳಸುವುದು)
    3. ನಾಮಯಾದಿ ಪಟ್ಟಿ (Nominal Roll).
    4. ಶಾಲಾ ನವೀಕರಣ ಶುಲ್ಕ ರೂ. 205ಗಳನ್ನು ಪಾವತಿಸಿದ ಚಲನ್ ಪ್ರತಿ ಅಥವಾ ಆನ್‌ಲೈನ್ ಮೂಲಕ ಪಾವತಿಸಿದ ಮುದ್ರಿತ ಪ್ರತಿ.

ಸಹಾಯಕ ನಿರ್ದೇಶಕರು ಮತ್ತು ಶಾಖಾಧಿಕಾರಿಗಳು,
ವಾಣಿಜ್ಯ ಶಾಖೆ, 4ನೇ ಮಹಡಿ,
ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ,
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03
ಮಂಡಳಿಯ ದೂರವಾಣಿ ಸಂಖ್ಯೆ:**080-23360073**
ಇ-ಮೇಲ್ ವಿಳಾಸ: **adpisvsection@gmail.com**

**ಹೆಚ್ಚಿನ ವಿವರಗಳಿಗಾಗಿ ಈ ಕೆಳಕಂಡ ಮಂಡಳಿಯ ಜಾಲತಾಣವನ್ನು ನೋಡುವುದು.**

**https://sslc.karnataka.gov.in**

**ಸೂಚನೆ:- ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಗೆ ಸಂಬಂಧಿಸಿದಂತೆ Flow chart ಅನ್ನು ಸಂಸ್ಥೆಯ ಲಾಗಿನ್‌ನಲ್ಲಿ ಲಭ್ಯ ಮಾಡಲಾಗುವುದು. ಅದರಂತೆ ಕ್ರಮವಹಿಸಿ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ Upload ಮಾಡುವುದು.**

Geetha S 1/3/2021

(ಎಸ್.ಗೀತಾ)
ನಿರ್ದೇಶಕರು
(ಇತರೆ ಪರೀಕ್ಷೆಗಳು)

ಪ್ರತಿಯನ್ನು:-

1. ಮಾನ್ಯ ಆಯುಕ್ತರು ಸಾ.ಶಿ.ಇ. ಬೆಂಗಳೂರು ರವರಿಗೆ ಮಾಹಿತಿಗಾಗಿ,

2. ರಾಜ್ಯದ ಎಲ್ಲಾ ಜಿಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ, ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ನೋಡಲ್ ಅಧಿಕಾರಿಗಳಿಗೆ, ಸೂಕ್ತ ಕ್ರಮಕ್ಕಾಗಿ.
4. ಹಿರಿಯ ಸಹಾಯಕ ನಿರ್ದೇಶಕರು (ವಾಣಿಜ್ಯ ಪರೀಕ್ಷೆಗಳು) ಆಯುಕ್ತರ ಕಛೇರಿ, ಬೆಂಗಳೂರು, ವಿಭಾಗೀಯ ಆಯುಕ್ತರ ಕಛೇರಿ, ಧಾರವಾಡ, ಕಲಬುರಗಿ ರವರಿಗೆ ಸೂಕ್ತ ಕ್ರಮಕ್ಕಾಗಿ.
5. ವಿಭಾಗೀಯ ಸಹನಿರ್ದೇಶಕರು, ಸಾ.ಶಿ.ಇಲಾಖೆ, ಬೆಂಗಳೂರು, ಮೈಸೂರು, ಬೆಳಗಾಂ ಮತ್ತು ಕಲಬುರಗಿ ರವರಿಗೆ ಅಗತ್ಯ ಕ್ರಮಕ್ಕಾಗಿ.
6. ಶಾಖಾಧಿಕಾರಿಗಳು, ಗಣಕ ಶಾಖೆ.
7. ರಾಜ್ಯದ ವಾಣಿಜ್ಯ ಸಂಸ್ಥೆಗಳ ಮುಖ್ಯಸ್ಥರುಗಳಿಗೆ ಸೂಕ್ತ ಕ್ರಮಕ್ಕಾಗಿ
8. ಕಛೇರಿ ಪ್ರತಿ.